ಕಥೆಯ ಗೌರಿಗೆ (ಅದೇ ಹೆಸರು) ಸಿಗಲಾರದು. ಗೌರಿ ತನ್ನ ಮನೆಯ ಆಳು ಶಿವರುದ್ರನ ಕುರಿತು ಅತೀವ ಸಲಿಗೆ ಬೆಳೆಸಬಲ್ಲಳು; ಕನಸನ್ನು ಕಾಣಬಲ್ಲಳು. ಆದರೆ, ಕೃಷ್ಣ ಅವರು ಬಹುಬೇಗ ತಮ್ಮ ಮಿತಿ ತಿಳಿದಿದ್ದು 'ಸುಟ್ಟ ತಿಕದ ದೇವರು' ಸಂಕಲನದ ಕಥೆಗಳ ಮೂಲಕ. ಅವರ ಕಾದಂಬರಿಗಳಲ್ಲಿ ಬರುವ ಹಳ್ಳಿಯ ದಟ್ಟ ಅನುಭವಗಳು; ಕಾಮದ ಒದ್ದಾಟಗಳು; ಧರ್ಮದ ಒಳಸೂಕ್ಷ್ಮಗಳು ಎಲ್ಲವೂ ಅವರನ್ನು ಮುಖ್ಯ ಗದ್ಯಕಾರರನ್ನಾಗಿ ಮಾಡಿವೆ. ಅವರಲ್ಲಿಯೇ ಅನೇಕ ಪ್ರಾದೇಶಿಕ ಭಿನ್ನತೆಗಳನ್ನು ಕಾಣಲು ಸಾಧ್ಯ. ಕಥನ, ಕಾವ್ಯ, ಕಾದಂಬರಿ ಲೋಕದಲ್ಲಿ ಬಳಕೆಯಾಗಿರುವ ಭಾಷೆ ತನ್ನ ಆಶಯಗಳಿಗೆ ತಕ್ಕಂತೆ ಬದಲಾಗುತ್ತಾ ಹೋಗುತ್ತದೆ. ಶೂದ್ರ ಬದುಕಿನ ವಿವರಗಳು ಇಲ್ಲಿ ಭಾಷಿಕಲೋಕವನ್ನು ಮತ್ತು ಅದೇ ಕಾಲಕ್ಕೆ ಲೋಕದೃಷ್ಟಿಯನ್ನು ವಿಸ್ತರಿಸುತ್ತಾ ಹೋಗಿವೆ. ಅವರ ಕಾದಂಬರಿಗಳು ಕುವೆಂಪು ಕಾದಂಬರಿಗಳ ಜೊತೆಗಿಟ್ಟು ನೋಡುವ ತುರ್ತು ಕೊಂಚ ಜಾಸ್ತಿಯೇ ಇದೆ.

ಶೂದ್ರ ಬಾಳನ್ನು ಮತ್ತಷ್ಟು ಕಲೆಗಾರಿಕೆಗೆ ಒಳಪಡಿಸಿ, ಅದುವರೆಗೆ ಕಾವುಕೂತ ದಟ್ಟ ಅನುಭವಲೋಕವೊಂದು ತೆರೆದುಕೊಂಡಿದ್ದು ದೇವನೂರ ಮಹಾದೇವರಲ್ಲಿ. ಶೂದ್ರ ಮತ್ತು ದಲಿತ ಬಾಳಾಟಗಳು ಅಲ್ಲಿಯತನಕ ಬಂದಿಲ್ಲವೆಂತಲ್ಲ. ಈ ಹಿಂದೆ ಹೇಳಿದ ಕೊರಡ್ಕಲ್, ಭಾರತೀಪ್ರಿಯ, ಟೇಂಗ್ಸೆ ಮುಂತಾದವರಲ್ಲಿ ಬಂದಿದ್ದವು. ಇವರ ಪ್ರಯತ್ನಗಳನ್ನು ಎಂದಿಗೂ ನಾವು ಗೌರವಿಸಬೇಕು. ಆದರೆ, ಸ್ವಬಾಳಿನ ಬೆನ್ನಲ್ಲಿ ಅದೇ ವಂಚಿತ ಲೋಕದ ವಿವರಗಳನ್ನು ಪಕ್ವವಾಗಿ, ರೂಪಕಗಳಾಗಿ, ದೃಶ್ಯಗಳಾಗಿ ನಿರ್ಮಿಸಿದ್ದು ಮಹಾದೇವರ ಹೆಚ್ಚುಗಾರಿಗೆ. ಕೊರಡ್ಕಲ್ ಅವರ 'ಧಣಿಯರ ಸತ್ಯನಾರಾಯಣ' ಮತ್ತು ದೇವನೂರರ 'ಮಾರಿಕೊಂಡವರು' – ಎರಡೂ ಕಥೆಗಳ ಮನುಷ್ಯರಿಗೆ ಜಮೀನ್ದಾರಿಗಳ ರಾವು ಬಡಿದಿದೆ. ಒಂದು ಕಥೆಯಲ್ಲಿ ಧಣಿ ಮತ್ತು ದೇವರಾದ ಸತ್ಯನಾರಾಯಣ ಇಬ್ಬರೂ ಮಕ್ಕಳ ಪಾಲಿಗೆ ಖಳನಾಯಕರೇ ಆಗಿದ್ದಾರೆ. ಭೂಮಿಯ ಪ್ರಶ್ನೆಗಳು, ಕುಲದ ಪ್ರಶ್ನೆಗಳು ಮತ್ತು ಒಟ್ಟಾರೆ ವ್ಯಕ್ತಿಯ ಅಭದ್ರತೆಗಳನ್ನು ಎರಡೂ ಕಥೆಗಳಲ್ಲಿ ಕಾಣಬಹುದು. ದೇವನೂರರಲ್ಲಿ 'ಮಾರಿಕೊಂಡವರು' ಹಾಲುಮತದ ದಂಪತಿಗಳು. ಕೊರಡ್ಕಲ್‌ರ ಕಥೆಯಲ್ಲಿ ಬರುವ ಹಾಗೆ ವಲಸೆ ಬಂದ ದಿಕ್ಕಿಲ್ಲದ ಜಾತಿಯವರೇ ಆಗಿದ್ದರು. ಇಲ್ಲಿ ದೇವನೂರು ಮನುಷ್ಯರ ಭಾವನೆಗಳನ್ನು ಕೇವಲ ಕಣ್ಣಂಚಿನಲ್ಲಿ ತೇಲಿಸಿಬಿಡುವುದಿಲ್ಲ. ಬಲಿತಲೋಕಗಳು ಮುಗ್ಧಲೋಕವನ್ನು ಹೇಗೆ ಮಾನಸಿಕ ಕೊಲೆ ನಡೆಸುತ್ತಿವೆ ಎಂಬುದನ್ನು ಭಾಷಿಕ ರೂಪಕಗಳ ಮುಖೇನವೇ ಅಭಿವ್ಯಕ್ತಿಸುತ್ತಾರೆ. 'ಕಿಟ್ಟಪ್ಪನ ರೊಗ್ಗು ಲಚುಮಿಯನ್ನು ಅವುಚಿಕೊಂಡಿತ್ತು' ಎಂಬ ಕಾವ್ಯಾತ್ಮಕ ಪ್ರತಿಮೆ ಓದುಗನನ್ನು ಬೇರೊಂದು ಅಲೆಗಳಲ್ಲಿ ತೇಲಿಸಬಹುದು. ಅವರ ಬಹುತೇಕ ಕಥೆಗಳಲ್ಲಿ 'ಮಾನಸಿಕ ಕೊಲೆ' ರಕ್ತಪಾತಕ್ಕಿಂತ ಭೀಕರವಾದುದು. ಆ ಕಾರಣಕ್ಕಾಗಿಯೇ ಇಲ್ಲಿನ ಮುಗ್ಧಲೋಕ ಸದಾ ಮೇಲುಜಾತಿಗಳ ಜೊತೆ ಸಂಘರ್ಷ ನಡೆಸುತ್ತಲೇ ಇರುತ್ತದೆ. ರೋಲಾಬಾರ್ಥ 'ಪುರಾಣವೂ ಒಂದು ಭಾಷೆ'ಎಂದು ಹೇಳುತ್ತಾನೆ. ದೇವನೂರು ಶೂದ್ರ ಬಾಳಾಟಗಳನ್ನು ಪುರಾಣಗೊಳಿಸಿರುವುದು ಸರಿಯಷ್ಟೆ.

## ಕನ್ನಡ ಕಥನಕ್ರಮ ಮತ್ತು ಕಾಮ

ಆರಂಭದ ನವ್ಯಕ್ಕಿದ್ದ ಬಹಳದೊಡ್ಡ ಲೋಪವೆಂದರೆ ಕೇವಲ ಮನುಷ್ಯನ ಅಂತರಂಗಗಳ ಕಂಪನಗಳಿಗೆ ತಾಕಿ ಗ್ರಾಮ ಬದುಕಿನ ಮತ್ತು ಸಣ್ಣಪುಟ್ಟ ಪಟ್ಟಣಗಳ ಜೀವಿತಗಳನ್ನು ಅನಾವರಣಗೊಳಿಸದೇ ಇರುವುದು. ಗ್ರಾಮ ಬದುಕು ಎಂದರೆ ಕೇವಲ ಇಲ್ಲಿ ಮುಗ್ಧತೆ, ಪೂರ್ವಿಕರ ನಂಬಿಕೆಗಳು, ದೇವರನ್ನು ಅತಿಯಾಗಿ ನಂಬಿಸುವುದು, ಇವೆಲ್ಲ ಒಂದು ಕಾಲಕ್ಕೆ ಇದ್ದವು. ನವೋದಯದ ಕಥನಕಾರರು ಇವುಗಳನ್ನು ಅನುಕಂಪ ಮತ್ತು ಆದರ್ಶಗಳ ಹಿನ್ನೆಲೆಯಲ್ಲಿ ತಂದಿದ್ದರು. ಇದು ಪೂರ್ಣಮಟ್ಟದಲ್ಲಿ ತಪ್ಪು ಎಂದು ಹೇಳಲಿಕ್ಕೆ ಆಗುವುದಿಲ್ಲ. ಆದರೆ, ಈ ಕಾಳಜಿಗಳನ್ನು ಮುಂದಿನ ಲೇಖಕರು ತೀವ್ರವಾಗಿ ಮುರಿದರು. ಪ್ರಗತಿಶೀಲರಲ್ಲಿ ಬಂದ ಅನ್ಯಾಯ, ನಗರದ ಸಣ್ಣತನಗಳು, ಅನುಕಂಪರಹಿತ ಬದುಕು – ಇವೆಲ್ಲವೂ ಕೇವಲ ಸಿಟ್ಟಿನಿಂದ, ಅತಿಯಾದ ಭಾಷೆಯ ವಿವರಗಳಿಂದ ಬಂದವು ಅನಿಸುತ್ತವೆ. ಕಾದಂಬರಿ ರೂಪದಲ್ಲಿ ಕೆಲವನ್ನು ಹಾಗು ಕೆಲ ಕಥೆಗಳ ಬೆನ್ನಲ್ಲಿ ಇದು ನಿಜ ಅಲ್ಲದೇ ಇರಬಹುದು. ಕಾಮವನ್ನು ಅನಕೃ ಅವರು ಒಂದು ಥಿಯರಿಯಾಗಿ ಮಂಡಿಸುವುದಕ್ಕೆ ಹೋದಾಗ,